# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 769/2015 ಸಿಡಬ್ಲೂ: 1 ಪಿಡಬ್ಲೂ: 8

ಪ್ರಮಾಣವಚನ ಬೋಧಿಸಲಾಯಿತು ದಿಃ 08-05-2025

ಹೆಸರು : ವಾಸುದೇವ

ತಂದೆ ಹೆಸರು : ಭೀಮಣ್ಣ

ವಯಸ್ಸು : 45 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ತೆಲಕೂರು

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಮೃತ ಅಭಿಲಾಶ್ ನನ್ನ ಮಗ. ಚಾ ಸಾ 4 ನನ್ನ ಹೆಂಡತಿ, ಚಾ ಸಾ 5 ನನ್ನ ತಂಗಿ. ನನ್ನ ಮಗ ಅಭಿಲಾಶ್ ಈತನು ರಸ್ತೆ ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ಸುಮಾರು 10 ವರ್ಷಗಳ ಹಿಂದೆ ರಾತ್ರಿ 08-00 ರಿಂದ 09-00 ಗಂಟೆ ಸುಮಾರಿಗೆ ಅಪಘಾತ ಆಗಿತ್ತು. ಸದರಿ ಅಪಘಾತ ಆಕಾಶ್ ಡಾಬಾ ಹತ್ತಿರ ಆಗಿತ್ತು. ಸದರಿ ಅಪಘಾತ ಆರೋಪಿತನು ತನ್ನ ಮೋಟಾರು ಸೈಕಲ್ ನಿಂದ ಡಿಕ್ಕಿ ಪಡಿಸಿ ಅಪಘಾತ ಮಾಡಿರುತ್ತಾನೆ. ನಂತರ ಪೋಲೀಸರು ನನಗೆ ಅಪಘಾತದ ವಿಷಯ ತಿಳಿಸಿರುತ್ತಾರೆ. ನಂತರ ನಾನು ಆಸ್ಪತ್ರೆಗೆ ಹೋಗಿ ನೋಡಲಾಗಿ ನನ್ನ ಮಗನಿಗೆ ತಲೆಗೆ ಹಾಗೂ ಮೂಗಿಗೆ ಗಾಯಗಳಾಗಿದ್ದವು. ಸದರಿ ಅಪಘಾತ ನನ್ನ ಮಗ ರಸ್ತೆ ಯಿಂದ ಹೋಗುತ್ತಿರುವಾಗ ಆರೋಪಿತನು ತನ್ನ ವಶದಲ್ಲಿದ್ದ ಮೊಟಾರು ಸೈಕಲನ್ನು ಅತಿವೇಗದಿಂದ ಬಂದು ಡಿಕ್ಕಿ ಪಡಿಸಿ ಅಪಘಾತ ಪಡಿಸಿರುತ್ತಾನೆ. ಸದರಿ ಮೊಟಾರು ಸಕೈಲ್ ನಂಬರು ನನಗೆ ಹೇಳಲು ಬರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ವಾಟೀಸವಾಲುಃ** ಮಾನ್ಯ ಸ.ಸ.ಅ ರವರಿಂದ ಃ

ದಿ.20-09-2018 ರಾತ್ರಿ 09-00 ಗಂಟೆ ಸುಮಾರಿಗೆ ನಾನು ಮತ್ತು ಚಾ ಸಾ 4 ರವರು ಮನೆಯಲ್ಲಿದ್ದಾಗ ನಮ್ಮ ಮಗನಿಗೆ ಅಪಘಾತ ಆಗಿರುವ ಬಗ್ಗೆ ಚಾ ಸಾ 5 ರವರು ನಮಗೆ ಪೋನು ಮುಖಾಂತರ ತಿಳಿಸಿರುತ್ತಾರೆ ಎಂದರೆ ಸರಿ. ನನ್ನ ಮಗ ಆಕಾಶ್ ಡಾಬಾದ ಎದುರುಗಡೆ ಸ್ಥಾಪನೆ ಮಾಡಿದ ಗಣೇಶನ ದರ್ಶನ ಮಾಡಿಕೊಂಡು ಸೇಡಂ ಕೊಡಂಗಲ್ ಮುಖ್ಯ ರಸ್ತೆಯನ್ನು ದಾಟುತ್ತಿರುವಾಗ ವಿ ಸಿ ಎಫ್ ಕಡೆಯಿಂದ ಆರೋಪಿತನು ತನ್ನ ವಶದಲ್ಲಿದ್ದ ಮೊಟಾರು ಸೈಕಲ್ ನಂಬರು ಕೆ ಎ 34 ವಿ 4108 ನೇದ್ದನ್ನು ಅತಿವೇಗ ಮಾತ್ತು ನಿಶ್ಕಾಳಜಿತನದಿಂದ ನಡೆಯಿಸಿಕೊಂಡು ಬಂದು ರೋಡು ದಾಟುತ್ತಿದ್ದ ಈತನಿಗೆ ಡಿಕ್ಕಿ ಪಡಿಸಿ ಮೋಟಾರು ಸೈಕಲ್ ಸ್ಥಳದಲ್ಲಿಯೇ ಬಿಟ್ಟು ಹೋಗಿರುತ್ತಾನೆ ಎಂದರೆ ಸರಿ. ಆದ್ದರಿಂದ ಸದರಿ ಅಭಿಲಾಶ್ ಈತನಿಗೆ ತಲೆಗೆ ಎಡ ಭಾಗದಲ್ಲಿ ಭಾರಿ ರಕ್ತಗಾಯ ಆಗಿತ್ತು ಎಂದರೆ ಸರಿ. ಸದರಿಯವರು ಮಾತನಾಡು ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿ. ನಂತರ ಚಾ ಸಾ 4 ಮತ್ತು 5 ರವರ ಆತನಿಗೆ ಸೇಡಂ ನಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಉಪಚಾರ ಕುರಿತು ದಾಖಲು ಮಾಡಿರುತ್ತಾರೆ ಎಂದರೆ ಸರಿ. ನಂತರ ಹೆಚ್ಚಿನ ಉಪಚಾರ ಕುರಿತು ಕಲಬುರಗಿ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗುತ್ತಿರುವಾಗ ತೆಂಗಳ್ಳಿ ಕ್ರಾಸ್ ಹತ್ತಿರ ನನ್ನ ಮಗ ಅಭಿಲಾಶ್ ಈತನು ಮೃತ ಪಟ್ಟಿದ್ದನು ಎಂದರೆ ಸರಿ. ಸದರಿ ಅಪಘಾತ ಆರೋಪಿತನ ತಪ್ಪಿ ನಿಂದ ಆಗಿರುತ್ತದೆ. (ಈ ದಿನ ಆರೋಪಿತನು ಗೈರು ಹಾಜರಿರುತ್ತಾರೆ. ಆರೋಪಿ ಪರ ವಕೀಲರು ಆರೋಪಿಯ ಗುರತಿಸುವ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ವಾದ ಮಂಡಿಸಿರುತ್ತಾರೆ.)

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ ಃ

ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**

**ಸಿ ಸಿ 769/2022**
**ಪಿ ಡಬ್ಲ್ಯೂ -8**
**ದಿ.09-05-2025**

**ಪಾಟೀಸವಾಲುಃ** ಆರೋಪಿ ಪರ ಶ್ರೀ ಎ ಎಂ ವಕೀಲರಿಂದ ಃ

ಅಪಘಾತ ಆದ ಸ್ಥಳದ ಪಕ್ಕದಲ್ಲಿ ಗಣೇಶ ಮೂರ್ತಿ ಕೂರಿಸಿದ್ದರು ಎಂದರೆ ಸರಿ. ಅಲ್ಲಿ ಬೆಳೆಗ್ಗೆ ಯಿಂದ ಮರುದಿನ ಬೆಳಗ್ಗೆ ವರೆಗೆ ಅಲ್ಲಿ ಪೂಜಾ, ಪಾಟ ಮತ್ತು ಭಜನೆ, ಪ್ರಸಾದ ವಿತರಣೆ ಎಲ್ಲಾ ಇರುತ್ತದೆ ಎಂದರೆ ಸರಿ. ನಾನು ವಿ ಸಿ ಎಫ್ ನಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ಘಟನೆ ನಡೆದ ಸ್ಥಳ ಎಲ್ಲಾ ಕಡೆಯಿಂದ ವಾಹನಗಳು ಬರುತ್ತಾ ಹೋಗುತ್ತಾ ಇರುವುದರಿಂದ ಯಾವಾಗಲೂ ಅಲ್ಲಿ ರಶ್ ಇರುತ್ತದೆ ಎಂದರೆ ಸರಿ. ಅಲ್ಲಿ ಯಾವುದೇ ವಾಹನಗಳು ಅತಿವೇಗವಾಗಿ ಬರಲು ಸಾಧ್ಯವಿಲ್ಲ ಎಂದರೆ ಸರಿ. ದಿ. 20-09-2018 ರಂದು ನನ್ನ ಮಗನಿಗೆ ಆಗಿರುವ ಅಪಘಾತ ನನ್ನ ಕಣ್ಣಾರೆ ಕಂಡಿಲ್ಲ. ಸದರಿ ಅಪಘಾತ ಯಾರ ತಪ್ಪಿ ನಿಂದ ಸಂಬವಿಸಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ಅಪಘಾತಕ್ಕೆ ಸಂಬಂದಿಸಿದ ಪರಿಹಾರ ಕೇಳಿದ್ದೇನೆ ಎಂದರೆ ಸರಿ. ಆರೋಪಿತನು ತನ್ನ ವಶದಲ್ಲಿದ್ದ ಮೋಟಾರು ಸೈಕಲ್ ನಂ. ಕೆ ಎ 3 ಇ 4108 ನೇದ್ದನ್ನು ಅತಿವೇಗ ಮತ್ತು ನಿಶ್ಕಾಳಜಿತದಿಂದ ಚಲಾಯಿಸಿಕೊಂಡು ಬಂದು ಅಪಘಾತ ಪಡಿಸಿರುವ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿಲ್ಲ ಎಂದರೆ ಸರಿ. ಅದೇ ರೀತಿ ಚಾ ಸಾ 4 ಮತ್ತು 5 ರವರು ನನಗೆ ಅಭಿಲಾಶ್ ಈತನು ಮೃತ ಪಟ್ಟಿರುವ ಬಗ್ಗೆ ತಿಳಿಸಿರುತ್ತಾರೆ ಎಂದರೆ ಸರಿಯಿಲ್ಲ. ಸದರಿ ಅಪಘಾತ ಆರೋಪಿಯ ತಪ್ಪಿ ನಿಂದ ಆಗಿಲ್ಲ ಎಂದರೆ ಸರಿ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**